grant ಎಂದು ಒಂದು ಬರುತ್ತದೆ. ಅಲ್ಲಿ ರಸ್ತೆ, ಒಳಚರಂಡಿಗಳ ನಿರ್ವಹಣೆ, ಲೈಟ್ ಬಿಲ್ ತುಂಬಲಿಕ್ಕೆ ಇತ್ಯಾದಿಗಳಿಗೆಂದು ಅದು ಬರುತ್ತದೆ. ಆದ್ದರಿಂದ ನೀವು ಹೇಳಿರುವುದನ್ನು clarify ಮಾಡಬೇಕು. SFC grant ಕೊಡುತ್ತೇವೆ ಎಂದರೆ regular grant ಕೊಡುತ್ತೀರೋ ಅಥವಾ ವಿಶೇಷ ಅನುದಾನವನ್ನು ಕೊಡುತ್ತೀರೋ ಅಥವಾ ಎರಡೂ ಕೂಡಿಸಿ ಕೊಡುತ್ತೀರೋ ಎನ್ನುವ ಬಗ್ಗೆ ತಾವು ನಿಶ್ಚಿತವಾದಂಥ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ:– ಮಾನ್ಯ ಸದಸ್ಯರು ಹೇಳಿದ ಹಾಗೆ, ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ. ತಮ್ಮನ್ನು ಪ್ರತ್ಯೇಕವಾಗಿ ನನ್ನ ಕಛೇರಿಗೆ ಕರೆಸಿ ತಮ್ಮ ಜೊತೆ ಮಾತನಾಡುತ್ತೇನೆ ಎಂದು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಿಳಿಸುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ :– ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ. SFC grant ಎಂದರೆ ಅದರಲ್ಲಿ ಎರಡು ತರಹ grant ಗಳಿವೆ. Regular ಒಂದು ಬರುತ್ತದೆ. ವಿಶೇಷ ಅನುದಾನ ಒಂದು ಇದೆ. ಇದರ ಬಗ್ಗೆ ನೀವು ಹೇಳಿಕೆ ಕೊಡಬೇಕು.

ಉಪಾಧ್ಯಕ್ಷರು :– ಅವರು ಹೇಳಿದರಲ್ಲ.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ :– ಮಾನ್ಯ ಹಿರಿಯ ಸದಸ್ಯರಾದ ಪ್ರಕಾಶ ಹುಕ್ಕೇರಿಯವರಿಗೆ ಯಾವತ್ತೂ special ಆಗಿರುತ್ತದೆ. ಅದಕ್ಕೋಸ್ಕರ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದೇನೆ.

ಮಂಡ್ಯ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ.

234 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ)

ಶ್ರೀ ಸಿ.ಎಂ.ಉದಾಸಿ. (ಲೋಕೋಪಯೋಗಿ ಸಚಿವರು)

ಅ) ಮಂಡ್ಯ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಎಷ್ಟು;

ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ರೂ.5337.50 ಲಕ್ಷಗಳು ವೆಚ್ಚದಲ್ಲಿ ಒಟ್ಟು 67 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಆ) ಅವುಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಪ್ರಸಕ್ತ ಸಾಲಿಗೆ ಲೆಕ್ಕಶೀರ್ಷಿಕೆ 5054 ಓಆರ್‌ಎಫ್ ಅಡಿಯಲ್ಲಿ 54 ಕಾಮಗಾರಿಗಳಿಗೆ ರೂ.1184.50 ಲಕ್ಷಗಳು ಹಾಗೂ ಸಿಆರ್‌ಎಫ್ ಮತ್ತು ನಬಾರ್ಡ್ ಯೋಜನೆಗಳಡಿಯಲ್ಲಿ 13 ಕಾಮಗಾರಿಗಳಿಗೆ ಒಟ್ಟುರೂ.1452.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಇ) ಶ್ರೀರಂಗಪಟ್ಟಣ ತಾಲ್ಲೂಕಿನಾದ್ಯಂತ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಯಾವುವು ಮತ್ತು ಅವುಗಳಿಗೆ ಒದಗಿಸಿರುವ ಅನುದಾನ ಎಷ್ಟು;

ಶ್ರೀರಂಗಪಟ್ಟಣ ತಾಲ್ಲೂಕಿಗೆ 2008–09ನೇ ಸಾಲಿನ ಆಯವ್ಯಯದಲ್ಲಿ ರೂ.275.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 7 ಹೊಸ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿವರಗಳು ಅನುಬಂಧದಲ್ಲಿವೆ.

ಈ) ಶ್ರೀರಂಗಪಟ್ಟಣ ತಾಲ್ಲೂಕಿನಾದ್ಯಂತ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಅನುಬಂಧದಲ್ಲಿ ತಿಳಿಸಲಾಗಿರುವ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಲ್ಲದೆ ಲೆಕ್ಕಶೀರ್ಷಿಕೆ 3054 ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿಗೆ ರೂ.103.50 ಲಕ್ಷ ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ರಸ್ತೆ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ರೂ.108.04 ಲಕ್ಷಗಳ ಅನುದಾನದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಸಹ ಕೈಗೊಂಡು ರಸ್ತೆಗಳನ್ನು ಸುಸ್ಥಿತಿಯಲ್ಲಿಡಲಾಗಿದೆ.

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ್ ಬಂಡಿಸಿದ್ದೇಗೌಡರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 234ಕ್ಕೆ ಉತ್ತರ

2008–09ನೇ ಸಾಲಿನ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕಾಮಗಾರಿಗಳ ವಿವರ

ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿ ಪ್ರಗತಿ
1.	ಹುಂಜನಕೆರೆಯಿಂದ ಶ್ರೀರಂಗಪಟ್ಟಣ ಗಾಮನಹಳ್ಳಿ ತಡಗವಾಡಿ ಮುಖಾಂತರ ಹೋಗುವ ರಸ್ತೆ ಅಭಿವೃದ್ಧಿ ಸ.1.00ರಿಂದ 3.30 ಕಿ.ಮೀ	50.00	ಟೆಂಟರ್ ಅನುಮೋದನೆಗೊಂಡಿದೆ. ದಿ:28–1–2009ರಂದು ಕಾರ್ಯಾದೇಶ ನೀಡಲಾಗಿದೆ
2.	ಚಿನ್ನಾಯಕನಹಳ್ಳಿ ತೂಬಿನಕೆರೆ ಶ್ರೀರಂಗಪಟ್ಟಣ ರಸ್ತೆ ಅಭಿವೃದ್ಧಿ ಸ.4.00 ರಿಂ 6.30 ಕಿ.ಮೀ	20.00	ಟೆಂಡರ್ ಅನುಮೋದನೆಗೊಂಡಿದೆ
3.	ಅರಕೆರೆ ಮಂಡ್ಯ ಬನ್ನೂರು ರಸ್ತೆ ಅಭಿವೃದ್ಧಿ(ಆಯ್ದಭಾಗಗಳಲ್ಲಿ) ಸ.1.00 ರಿಂದ 7.90 ಕಿ.ಮೀ	30.00	ಟೆಂಡರ್ ಅನುಮೋದನೆಗೊಂಡಿದೆ. ದಿ:28–1–2009ರಂದು ಕಾರ್ಯಾದೇಶ ನೀಡಲಾಗಿದೆ.
4.	ಮೈಸೂರು ಕೊತ್ತತ್ತಿ ರಸ್ತೆ ಸ.6.90ರಿಂದ 17.60 ಕಿ.ಮೀವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ(ಆಯ್ದ ಭಾಗಗಳಲ್ಲಿ)	50.00	ಟೆಂಡರ್ ಅನುಮೋದನೆಗೊಂಡಿದೆ. ದಿ:28–1–2009ರಂದು ಕಾರ್ಯಾದೇಶ ನೀಡಲಾಗಿದೆ.
5.	ಮಂಡ್ಯ ಅರಕೆರೆ ರಸ್ತೆಯಿಂದ ಮಹದೇವಪುರ ಬನ್ನೂರು ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ	50.00	ಟೆಂಡರ್ ಅನುಮೋದನೆಗೊಂಡಿದೆ.
6.	ಬಿಎನ್ ರಸ್ತೆಯಿಂದ ಸಬ್ಬನಕುಪ್ಪೆ ಮಾರ್ಗವಾಗಿ ಆರತಿಉಕ್ಕಡಕ್ಕೆ ಸೇರುವ ರಸ್ತೆ ಅಭಿವೃದ್ಧಿ	50.00	ಟೆಂಡರ್ ಅನುಮೋದನೆಗೊಂಡಿದೆ.
7.	ಬಿಎನ್ ರಸ್ತೆಯಿಂದ ಕೊಡಿಯಾಲ ರಸ್ತೆ ಅಭಿವೃದ್ಧಿ	25.00	ಟೆಂಡರ್ ಅನುಮೋದನೆಗೊಂಡಿದೆ.
	ಒಟ್ಟು	**275.00**	

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ:– ಶ್ರೀರಂಗಪಟ್ಟಣ ತಾಲ್ಲೂಕು ಮತ್ತು ಕೆ.ಆರ್. ಸಾಗರದ ಪದವಿಪೂರ್ವ ಕಾಲೇಜಿನ ಹೆಚ್ಚುವರಿ ಕಟ್ಟಡ ಹಾಗೂ ಬೆಳಗೊಳದ Junior College ನ ಹೆಚ್ಚುವರಿ ಕಟ್ಟಡದ ಸುಮಾರು ಅರ್ಧ ಭಾಗ ಕೆಲಸ ಮಾಡಿ, ಮುಂದೆ ಅದನ್ನು Appendix-E ಯಲ್ಲಿ ಸೇರಿಸಿದಾಗ ಅದಕ್ಕೆ ಅನುದಾನವನ್ನು ಕೊಡದೆ ಕೈಬಿಟ್ಟು ಈಗ ಆ ಕೆಲಸ ಅರ್ಧಕ್ಕೆ ನಿಂತಿದೆ. ಜೊತೆಗೆ, KRDCL ನಿಂದ ಒಟ್ಟು 10 bridge ಗಳ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರು. ಸುಮಾರು 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿರುವಂಥ ಸೇತುವೆಗಳನ್ನು pwd ಯಿಂದ, 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಅನುದಾನವನ್ನು ಒದಗಿಸತಕ್ಕಂಥ ಸೇತುವೆಗಳನ್ನು KRDCL ವತಿಯಿಂದ ತೆಗೆದುಕೊಂಡಿದ್ದರು. ಸುಮಾರು 8 ಕಾಮಗಾರಿಗಳು ಇದುವರೆಗೆ ಏಕೆ ಪ್ರಾರಂಭಗೊಂಡಿಲ್ಲವೆಂದು ಗೊತ್ತಿಲ್ಲ. ಅದರಲ್ಲಿ ಅತ್ಯಂತ ಹೆಚ್ಚು ಜನ ತಿರುಗಾಡುವಂಥ, ಹೆಚ್ಚು ವಾಹನ ಸಂಚಾರವಿರುವಂಥ ರಸ್ತೆಗಳಿವೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಾ ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಇದು ತಡೆಹಿಡಿಯಲಾದ ಪ್ರಶ್ನೆಯಾಗಿತ್ತು. ಸುಮಾರು 584 ರಸ್ತೆಗಳಿಗೆ ಅನುಮತಿ ಕೊಟ್ಟಿದ್ದಾರೆ. 3411 ಕಿಲೋಮೀಟರ್ ರಸ್ತೆಗಳಲ್ಲಿ ಮೊದಲನೇ ಹಂತದಲ್ಲಿ 584 ಕಿಲೋಮೀಟರ್ ರಸ್ತೆಯನ್ನು K-SHIP-2, Ist Phase ನಲ್ಲಿ ಮಾಡುವುದಕ್ಕೆ ಕೊಟ್ಟರು. ಅದರಲ್ಲಿ ಒಂದು ಸರ್ಕಾರಿ ಆದೇಶವಾಗಿದೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ, enclosing G.O No.PWD-208/EFA-207, Bangalore dated 4.1.2008 ಅದರಲ್ಲಿ ಗಂಗಾವತಿ, ಕಂಪ್ಲಿ ಎಂದು ಹೇಳಿ ಚಿಕ್ಕೋಡಿಯವರೆಗೆ ಸುಮಾರು 584 ಕಿಲೋಮೀಟರ್ ರಸ್ತೆಯನ್ನು ಮಾಡಿದರು. ಇದು world Bank ನಿಂದ approval ಆಗಿದೆ, Cabinet ನಿಂದ approval ಆಗಿದೆ ಮತ್ತು 1200 ಕೋಟಿ ರುಪಾಯಿಗಳಿಗೆ ಕೇಂದ್ರ ಸರ್ಕಾರದಿಂದ ಅನುಮತಿ ಕೊಟ್ಟಿದ್ದಾರೆ. ಅಲ್ಲಿಂದ ಅನುಮತಿ ಕೊಟ್ಟಮೇಲೆ ನಮ್ಮ ಮಾನ್ಯ ಮಂತ್ರಿಯವರು ಒಳ್ಳೆಯ ಕೆಲಸ ಮಾಡಿದ್ದಾರೆ. ಏಕೆಂದರೆ, ಒಂದು ಕಡತವನ್ನು ಈಚೆಗೆ ಬಿಟ್ಟಿದ್ದಾರೆ. ಆ ಕಡತದಲ್ಲಿ ಏನಿದೆ ಎಂದರೆ, 585 ಕಿಲೋಮೀಟರ್ ರಸ್ತೆಯಲ್ಲಿ 375 ಕಿಲೋಮೀಟರ್‌ಗೆ ಬದಲಾವಣೆ ಮಾಡುತ್ತಾರೆ. ಆ 375 ಕಿಲೋಮೀಟರ್ ರಸ್ತೆ ಯಾವುದೆಂದರೆ, ಒಂದು ಶಿವಮೊಗ್ಗ ಜಿಲ್ಲೆಯ ಪಡಸಾಗೆ 170 ಕಿಲೋಮೀಟರ್ ರಸ್ತೆ ಸೇರಿಸುತ್ತಾರೆ. ಅನಂತರ ಶಿಕಾರಿಪುರಕ್ಕೆ 34 ಕಿಲೋ ಮೀಟರ್ ರಸ್ತೆಯನ್ನು ಸೇರಿಸುತ್ತಾರೆ. ಅದೇರೀತಿ, ಕಲ್ಮಂಡ್ junction ಗೆ 73 ಕಿಲೋಮೀಟರ್ ಹೀಗೆ 375 ಕಿಲೋಮೀಟರ್ ರಸ್ತೆಯನ್ನು ಬದಲಾವಣೆ ಮಾಡುತ್ತಾರೆ. ಇದು 7 ತಾಲ್ಲೂಕುಗಳಿಗೆ ಮಂಜೂರಾದ ರಸ್ತೆಯನ್ನು ಬದಲಾವಣೆ ಮಾಡಿದ್ದಾರೆ. ಬಂಟ್ವಾಳ–ಬೆಳ್ತಂಗಡಿ 35 ಕಿಲೋಮೀಟರ್, ಹಾಸನ–ಅರಕಲಗೂಡು

31 ಕಿಲೋಮೀಟರ್, ಮಂಡ್ಯ–ಕೌಡ್ಲೆ 34 ಕಿಲೋಮೀಟರ್ ರಸ್ತೆ, ಬಾಗೇವಾಡಿ–ಬೈಲಹೊಂಗಲ 23 ಕಿಲೋಮೀಟರ್, ಮುಂಡರಗಿ–ಹರಪನಹಳ್ಳಿ 26 ಕಿಲೋಮೀಟರ್, ಗಂಗಾವತಿ–ಕುಮ್ಮಿ 40 ಕಿಲೋಮೀಟರ್, ಹಡಗಲಿ–ಹರಪನಹಳ್ಳಿ 27 ಕಿಲೋಮೀಟರ್ ರಸ್ತೆಗಳು ಮಂಜೂರಾಗಿತ್ತು. ಎಲ್ಲಾ ಈ ಕಡೆಯೇ ಮಾಡುತ್ತಿದ್ದಾರೆ, ಅನ್ಯಾಯ ನಡೆಯುತ್ತಿಲ್ಲವೆಂದು ಉತ್ತರ ಕರ್ನಾಟಕದ ಭಾಗದಲ್ಲಿ ಹೇಳಿದ್ದೀರಲ್ಲ. ತಾರತಮ್ಯವಾಗಿರುವುದಕ್ಕೆ ಇದೊಂದು ಉದಾಹರಣೆ ಹೇಳುತ್ತಿದ್ದೇನೆ. 375 ಕಿಲೋಮೀಟರ್ ರಸ್ತೆಯಲ್ಲಿ ಸುಮಾರು 204 ಕಿಲೋಮೀಟರ್ World Bank ನಿಂದ ಮಂಜೂರಾದ ರಸ್ತೆ. ಸುಮಾರು 400 ಕೋಟಿ ರೂಪಾಯಿಗಳ ರಸ್ತೆಯನ್ನು ಶಿವಮೊಗ್ಗಕ್ಕೆ ಕೊಟ್ಟಿದ್ದೀರೋ, ಇಲ್ಲವೋ, ಬದಲಾವಣೆ ಮಾಡಿದ್ದೀರೋ, ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು. ಹಾಗೆಯೇ, ಮೊದಲನೇ ಹಂತದಲ್ಲಿರುವ ಇದನ್ನು ಯಾವ basis ಮೇಲೆ ಬದಲಾವಣೆ ಮಾಡಿದರು? ಈ 7 ರಸ್ತೆಗಳು ಯಾವ phase ನಲ್ಲಿತ್ತು? Second phase ನಲ್ಲಿತ್ತೋ, 3ನೇ ಹಂತದಲ್ಲಿತ್ತೋ, 4ನೇ ಹಂತದಲ್ಲಿತ್ತೋ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶಾಸಕರೆನ್ನುವ ದೃಷ್ಟಿಯಿಂದ ಇದನ್ನೇನಾದರೂ change ಮಾಡಿದ್ದೀರೋ, ಯಾವ ಆಧಾರದ ಮೇಲೆ change ಮಾಡಿದ್ದೀರಿ ಎನ್ನುವುದನ್ನು ಹೇಳಬೇಕು. ಹಾಗೆಯೇ, ಈ ಬಗ್ಗೆ paper ನಲ್ಲಿ notification ಕೊಟ್ಟಿದ್ದೀರಿ. ಅದಕ್ಕೆ ಇನ್ನೂ ಕೂಡ ಅನುಮತಿಯೇ ಸಿಕ್ಕಿಲ್ಲ. ಅದಕ್ಕೆ World Bank ನಿಂದ ಅನುಮತಿ ಸಿಕ್ಕಿದೆಯೇ? World Bank ನಿಂದ ಅನುಮತಿ ಸಿಕ್ಕದೆಯೇ paper ನಲ್ಲಿ advertisement ಹೇಗೆ ಕೊಟ್ಟಿರಿ? ಈ ರೀತಿ ಕೊಟ್ಟಿರುವುದಕ್ಕೆ Chief Engineer, Executive Engineer ಇವರು advertisement ಕೊಟ್ಟಿದ್ದರೆ, ಅವರನ್ನು suspend ಮಾಡುತ್ತೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಸಿ.ಎಂ.ಉದಾಸಿ:– ರಮೇಶ್ ಬಂಡಿಸಿದ್ದೇಗೌಡರವರು ಪ್ರಶ್ನೆ ಕೇಳಿದ್ದಾರೆ. ಅವರ ಪ್ರಶ್ನೆಗೆ ನಾನು ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅವರು ಹೇಳುತ್ತಿರುವ ಒಂದು ವಿಚಾರದಲ್ಲಿ ಒಂದು Junior College ನ ಕಟ್ಟಡದ ಕೆಲಸ ಅರ್ಧಕ್ಕೆ ನಿಂತಿರುವುದನ್ನು ಮುಂದಿನ ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದಾಗ ಅದನ್ನು Appendix ನಲ್ಲಿ ಬಿಟ್ಟಿದ್ದಾರೆಂದು ಹೇಳಿದ್ದಾರೆ. ಆ ಬಿಟ್ಟಿರುವ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸೂಚನೆಯನ್ನು ಕೊಡಲಾಗಿದೆ. ಇದೆಲ್ಲದಕ್ಕಿಂತ ಪ್ರಮುಖವಾಗಿ, ರಾಜ್ಯಪಾಲರ ಆಡಳಿತದಲ್ಲಿ ಒಂದು ಆದೇಶವನ್ನು ಹೊರಡಿಸಿ, ಅವರೇನು ಹೇಳಿದ್ದಾರೆಂದರೆ, "ಯಾವ ಕೆಲಸಗಳು ಪ್ರಾರಂಭವಾಗಿಲ್ಲ ಅವುಗಳನ್ನು ಕೈಬಿಡಲಿಕ್ಕೆ ಸೂಚನೆ ಕೊಟ್ಟಿದ್ದರು." ಅದನ್ನು ಕೊಡಬೇಕಾದಾಗ ಅಂಥ ಯಾವುವು ಕಾರ್ಯಗತವಾಗಿರಲಿಲ್ಲ ಅಂಥವುಗಳನ್ನು ಕೈಬಿಡುವಂಥ ಕೆಲಸ ಮಾಡಿದ್ದೇವೆ.

World Bank ನಿಂದ ಆಗಬೇಕಾಗಿರುವಂಥ ಕೆಲವು ರಸ್ತೆಗಳಿಗೆ ನಾವು ಕಾಮಗಾರಿಯನ್ನು ತೆಗೆದುಕೊಳ್ಳಬೇಕಾದಾಗ ಒಂದು ಸುತ್ತೋಲೆಯನ್ನು ಕೊಟ್ಟು ಇಲ್ಲಿ ಅವರು ಯಾವುದನ್ನು ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಸ್ಪಷ್ಟವಾಗಿ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಆ ಸ್ಪಷ್ಟವಾದ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು, ಎಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಅವಕಾಶವಿದೆ, acquisition ಮಾಡಲಿಕ್ಕೆ free ಇದ್ದಂಥ ಲ್ಯಾಂಡ್‌ಗಳಿಗೆ ಪ್ರಥಮ ಆದ್ಯತೆ ಕೊಡಬೇಕೆಂಬ ಮಾತುಗಳಿದ್ದದ್ದರಿಂದ, ಅದನ್ನು ಬದಲಾವಣೆ ಮಾಡಿ ಕೊಟ್ಟಿದ್ದೇವೆ. ಬದಲಾವಣೆ ಮಾಡಿದ್ದೇವೆಂದರೆ, ಕೈಬಿಟ್ಟಿಲ್ಲ. ಅದನ್ನು ಅವರು ಅರ್ಥಮಾಡಿಕೊಳ್ಳಬೇಕು. 3411 ಕಿಲೋಮೀಟರ್ ರಸ್ತೆ ಮಾಡಿ, ಈ ರಸ್ತೆಗಳನ್ನೇ ಬಿಟ್ಟುಬಿಟ್ಟಿದ್ದೇವೆಂದು ಹೇಳುವುದಿದ್ದರೆ ಆ ಮಾತು ಬೇರೆ ಇತ್ತು. 3411 ಕಿಲೋಮೀಟರ್ ರಸ್ತೆಗಳೇನು identification ಆಗಿವೆ, ಆ ಎಲ್ಲಾ ರಸ್ತೆಗಳನ್ನೂ ಹಾಗೆಯೇ ಇಟ್ಟುಕೊಂಡಿದ್ದೇವೆ. ಆದರೆ, ಬಿಡಬೇಕಾದಂಥ ಸಂದರ್ಭದಲ್ಲಿ ಏನು ಮಾಡಿದ್ದೇವೆಂದರೆ, that minimum of 40% of the encumbrance free road sections should be made available to the Contractors on the day of the contracts signing is not more than 3 section of the contiguous length of not less than 5 Kms. ಎಂದು ಮಾಡಿ World Bank ನವರು ಕೊಟ್ಟಿರುವ direction ಮೇರೆಗೆ hurdles free ಇರಬೇಕು ಅಂದರೆ, ಅಡ್ಡಿ ಆತಂಕಗಳಿಲ್ಲದಿರುವಂಥ ರಸ್ತೆಗಳನ್ನು ಪ್ರಥಮ ಆದ್ಯತೆಯಲ್ಲಿ ತೆಗೆದುಕೊಳ್ಳಿ, ಮುಂದೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಾದ ಮೇಲೆ ಅವುಗಳನ್ನು ತೆಗೆದುಕೊಳ್ಳುವುದಕ್ಕಾಗುತ್ತದೆ ಎನ್ನುವ ಸೂಚನೆಯನ್ನು ಕೊಟ್ಟದ್ದರ ಮೇರೆಗೆ ಇದನ್ನು ಮಾಡಿದ್ದಾರೆಯೇ ಹೊರತು ಇದರ ಬಗ್ಗೆ ತಪ್ಪು ಸಂದೇಶವನ್ನು ಕಳುಹಿಸುವಂಥ ಕೆಲಸವನ್ನು ಮಾಡಬೇಕಾಗಿಲ್ಲ. 3411 ಕಿಲೋಮೀಟರ್‌ನಲ್ಲಿ ಈಗೇನು ಕೈಬಿಟ್ಟಿದೆ ಎಂದು ಅವರು ಹೇಳಿದರಲ್ಲ, ಅವುಗಳನ್ನು ಭೂ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಏನು ಕಾರ್ಯಕ್ರಮವನ್ನು ಜರುಗಿಸಬೇಕಾಗಿದೆ, ಅದೆಲ್ಲವನ್ನೂ ಮಾಡಿಕೊಂಡು 3411 ಕಿಲೋಮೀಟರ್ ರಸ್ತೆಗಳನ್ನು ಮಾಡುವ ಕೆಲಸವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದ 3411 ಕಿಲೋಮೀಟರ್ ರಸ್ತೆಯನ್ನು ಬದಲಾವಣೆ ಮಾಡುವುದಕ್ಕೆ ಯಾರ ಕೈಯಿಂದಲೂ ಆಗುವುದಿಲ್ಲವೆನ್ನುವುದು ನನಗೆ ಗೊತ್ತಿದೆ. ಆದರೆ, ಅವರು ಭೂ ಸ್ವಾಧೀನ ಇಲ್ಲವೆಂದು ಹೇಳುತ್ತಾರೆ. ಈ ವರ್ಷ ಮಾರ್ಚ್ 31ರೋಳಗೆ World Bank ನ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಈ ರಸ್ತೆಗಳನ್ನು ಬದಲಾವಣೆ ಮಾಡಬೇಕಾದರೆ ಭೂ ಸ್ವಾಧೀನ ಇಲ್ಲವೆಂದು ಇವರು

ಹೇಳುತ್ತಾರೆ. ಅರಕಲಗೂಡು–ಹಾಸನ ರಸ್ತೆಯನ್ನು ಭೂ ಸ್ವಾಧೀನ ಇಲ್ಲವೆಂದು ಬದಲಾವಣೆ ಮಾಡಿದ್ದಾರೆ, ಬಂಟ್ವಾಳ–ಬೆಳ್ತಂಗಡಿ ರಸ್ತೆಯನ್ನು ಭೂ ಸ್ವಾಧೀನ ಇಲ್ಲವೆಂದು ಏನಾದರೂ ಹೇಳಿದ್ದರೆ ಮತ್ತು ಬದಲಾವಣೆ ಮಾಡುವುದಕ್ಕೆ World Bank ಅನುಮತಿ ಕೊಟ್ಟಿದ್ದಾರೆಂದು ಹೇಳಿಬಿಟ್ಟರೆ ಅವರೇನು ಹೇಳುತ್ತಾರೋ ಅದಕ್ಕೆ ನಾನು ರಾಜಕೀಯವಾಗಿ ನಿವೃತ್ತಿಯಾಗುವುದಕ್ಕೆ ರೆಡಿಯಾಗಿದ್ದೇನೆ. ಇಲ್ಲದಿದ್ದರೆ, ಅವರು ಈ ಸದನವನ್ನು ತಪ್ಪುದಾರಿಗೆ ತರುತ್ತಿದ್ದಾರೆ, ಅವರು ರೆಡಿಯಾಗುತ್ತಾರೆಯೇ ಕೇಳಿ. World Bank 584 ಕಿಲೋಮೀಟರ್ ರಸ್ತೆಗೆ clearance ಕೊಟ್ಟಿದೆ ಎಂದರೆ, ನಾನು ಈ ಸ್ಥಾನದಲ್ಲಿ ಐದು ನಿಮಿಷ ಇರುವುದಿಲ್ಲ.

ಶ್ರೀ ಬಿ.ರಮಾನಾಥ ರೈ :– ಮಂಗಳೂರಿನಿಂದ ಧರ್ಮಸ್ಥಳಕ್ಕೆ ಹೋಗುವ ರಸ್ತೆಯಲ್ಲಿ ತಾವು ಬಹಳಷ್ಟು ಸಾರಿ ಓಡಾಡಿರಬಹುದು. ಅದು ಒಂದು ರಾಜ್ಯ ಹೆದ್ದಾರಿ. ಅದರಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಮಾಡುವ ಜಾಗವಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಬಂಟ್ವಾಳದಿಂದ ಬೆಳ್ತಂಗಡಿಗೆ ಹೋಗುವ ರಸ್ತೆ ಅದು ಕೂಡ ರಾಜ್ಯ ಹೆದ್ದಾರಿಯಾಗಿದ್ದು , ಯಾವ ರೀತಿಯಲ್ಲೂ ಕೂಡ ಅದರಲ್ಲಿ ಭೂ ಸ್ವಾಧೀನ ಮಾಡತಕ್ಕಂಥ ಪ್ರಕ್ರಿಯೆ ಇಲ್ಲವೆನ್ನುವುದು ನನ್ನ ಅಭಿಮತ. ಇದರ ಬಗ್ಗೆ ತಾವು ಸರಿಯಾದ ಮಾಹಿತಿಯನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:– ಈ ವಿಷಯಕ್ಕೆ ಸಂಬಂಧಿಸಿದಂತೆ, ಸದನದ ಮುಂದೆ ಕಡತ ತರಿಸಿ. (ಗೊಂದಲ) ಆ ರಿಪೋರ್ಟ್ ಏನಿದೆ ಅದನ್ನು ಸದನದ ಮುಂದೆ ತರಿಸಿ. Land acquisition ಆಗಿರುವುದಿಲ್ಲವೆಂದು ಹೇಳಿದ್ದಾರಲ್ಲ, ಅದನ್ನು ಸದನದ ಮುಂದಿಡಿ. (ಗೊಂದಲ) ನಾನು ಹೇಳುವುದು ಸರಿ ಇಲ್ಲವೆಂದರೆ, ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ, ಮಂತ್ರಿಯವರು ರಾಜೀನಾಮೆ ಕೊಡುತ್ತಾರೆಯೇ, ಕೇಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಸಾಮಾನ್ಯವಾಗಿ ಶಾಸಕರು, ಮಂತ್ರಿಗಳು ಮಂಗಳೂರಿಗೆ ಬಂದವರು ಧರ್ಮಸ್ಥಳಕ್ಕೆ ಹೋಗದೆಯೇ ಯಾರೂ ಇರುವುದಿಲ್ಲ. ಆ ರಸ್ತೆ ಹೇಗಿದೆ ಎಂದು ಕಣ್ಣಲ್ಲಿ ಕಂಡವರುಬಹಳಷ್ಟು ಜನ ಇಲ್ಲಿದ್ದಾರೆ. ಅಲ್ಲಿ ಭೂ ಸ್ವಾಧೀನ ಮಾಡುವುದಕ್ಕೆ ಕಷ್ಟವಿದೆ ಎನ್ನುವ ಮಾತು ಬರುವುದಾದರೆ, ನನಗಿದು ಅರ್ಥವಾಗುತ್ತಿಲ್ಲ. ಇದಕ್ಕೆ ಅವರು ಸರಿಯಾದ ಉತ್ತರ ಕೊಡಬೇಕು. ಧರ್ಮಸ್ಥಳ ಒಳ್ಳೆಯ ಜಾಗ. ಪವಿತ್ರವಾದ ಸ್ಥಳಕ್ಕೆ ಹೋಗುವ ರಸ್ತೆಯದು. ಅದಕ್ಕೆ ತಾವು ಸರಿಯಾದ ಉತ್ತರವನ್ನು ಕೊಡಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :– 374 ಕಿಲೋಮೀಟರ್ ರಸ್ತೆಯನ್ನು ಬದಲಾವಣೆ ಮಾಡುತ್ತಾರೆ. (ಗೊಂದಲ) PWD Minister ರವರು ಸದನವನ್ನು

ತಪ್ಪುದಾರಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇಲ್ಲವಾದರೆ, ಇಧನ್ನು ವಾಪಾಸ್ ತೆಗೆದುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು :– ಅವರಿಗೆ ಉತ್ತರ ಕೊಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಮೆಟಗುಡ್ಡ: ಆ ಧರ್ಮಸ್ಥಳ ರಸ್ತೆ ಯಾವಾಗ ಕೆಟ್ಟು ಹೋಯಿತು ಎನ್ನುವುದರ ಬಗ್ಗೆ ಸ್ವಲ್ಪ ವಿಚಾರ ಮಾಡಲಿ ಸಾರ್. (ಗೊಂದಲ) ಪದೇ ಪದೇ ತನಿಖೆಯಾಗಬೇಕೆಂದು ಮಾತು ಬರುತ್ತದಲ್ಲಾ. ಆ ದಿಶೆಯಲ್ಲಿ ಯಾವಾಗ ರಸ್ತೆ ಕೆಟ್ಟುಹೋಯಿತು ಎನ್ನುವ ಬಗ್ಗೆ ತನಿಖೆಯಾದರೆ ಒಳ್ಳೆಯದಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು :– ಆಯಿತು, ತಾವು ಹೇಳಿದ್ದೀರಲ್ಲ. ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. (ಗೊಂದಲ) ರಮಾನಾಥ ರೈರವರೆ, ಮಂತ್ರಿಯವರು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎ. ಮಂಜು :– ಈ ಪ್ರಶ್ನೆಗೆ ಮಂತ್ರಿಯವರು ಬಹಳ ವ್ಯವಸ್ಥಿತವಾಗಿ ಮುಚ್ಚಿಕೊಳ್ಳುವಂಥ ಉತ್ತರವನ್ನು ಕೊಟ್ಟಿದ್ದಾರೆ. ಅವರು ಹಿರಿಯ ಸಚಿವರಾಗಿದ್ದು ಅವರ ಬಗ್ಗೆ ನಮಗೆ ಗೌರವವಿದೆ. ರಾಜ್ಯದ ಬಗ್ಗೆ ಅವರಿಗೆ ಕಾಳಜಿ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಆ ಕಾಳಜಿ ಏನಾದರೂ ಅವರಿಗೆ ಇದ್ದರೆ, ಹಾಸನ–ಅರಕಲಗೂಡು 31 ಕಿಲೋ ಮೀಟರ್ ರಸ್ತೆ ಏನಿದೆ... (ಗೊಂದಲ) ರವಿಯವರೆ, ಸ್ವಲ್ಪ ತಡೆಯಿರಿ, ನಮ್ಮ ಸಂಕಟ ನಮಗೆ ಗೊತ್ತು, ನೀವು ಮಾತನಾಡಬೇಡಿ, ನಾನು ಹೇಳುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಮಾನ್ಯ ಸದಸ್ಯರು :–K-Ship ನಲ್ಲಿ ತೆಗೆದುಕೊಂಡಂಥ ರಸ್ತೆಗಳನ್ನು ರದ್ದು ಮಾಡಿದ್ದಾರೆ. (ಗೊಂದಲ) ಮೊದಲನೇ Phase ನಿಂದ ತೆಗೆದು 3ನೇ Phase ಗೆ ಹಾಕಿದ್ದೀರಿ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಸದಸ್ಯರು ಸುಮ್ಮನೆ ತಪ್ಪು ಮಾಹಿತಿಗಳನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎ. ಮಂಜು:– ಮಾನ್ಯ ಮಂತ್ರಿಯವರು ಹಿರಿಯರಿದ್ದು ಅವರ ಬಗ್ಗೆ ನನಗೆ ಗೌರವವಿದೆ. ಮಾನ್ಯ ಉದಾಸಿಯವರು ಉದಾಸೀನದಿಂದ ಕಾಣಾತ್ತಾರೆಂದು ನಾನು ಅಂದುಕೊಂಡಿರಲಿಲ್ಲ. ಅವರು ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳಬೇಕೆನ್ನುವುದಾದರೆ ಮಾಡಿರುವ ತಪ್ಪಿಗೆ ಏನೋ ಹೇಳಿ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಡಿ. ಇದು World Bank ನಿಂದ ಆಗಿರತಕ್ಕಂಥದ್ದು ಮತ್ತು

ಇದನ್ನು 2nd Phase ನಲ್ಲಿ ಮಾಡಬೇಕೆಂದು ತೀರ್ಮಾನವಾಗಿದೆ. ಇದು Cabinet decision ಆಗಿ ಕೊಟ್ಟಿರತಕ್ಕಂಥದ್ದು. Land acquisition ಆಗಿಲ್ಲವೆಂದು ನೀವು ಹೇಳುತ್ತೀದ್ದೀರಿ. ಅರಕಲಗೂಡು–ಹಾಸನ ರಸ್ತೆಗೆ ಯಾವ land acquisition ಆಗಬೇಕೆಂದು ಹೇಳಿ ಸ್ವಾಮಿ. ಅವರು ರಾಜೀನಾಮೆ ಕೊಡಬೇಕು ಇಲ್ಲವೇ ನಾವು ರಾಜೀನಾಮೆ ಕೊಡಬೇಕು. ಅದೇನಾದರೂ ಒಂದು ತೀರ್ಮಾನವಾಗಲಿ. (ಗೊಂದಲ) ಇದನ್ನು ಮೊದಲು ಮಾಡಬೇಕಾದರೆ Principal Secretary ಗಳು ಎಲ್ಲರೂ ಕುಳಿತು ತೀರ್ಮಾನ ಮಾಡಿ ನೀವು ಇದರಲ್ಲಿರತಕ್ಕಂಥದ್ದನ್ನು ಮಾಡಿ ನಮಗೆ ಲಿಖಿತವಾಗಿ ಕೊಟ್ಟು 560 ಕಿಲೋ ಮೀಟರ್ ಮಾಡಬೇಕೆಂದು ತೀರ್ಮಾನ ಮಾಡಿರತಕ್ಕಂಥದ್ದಕ್ಕೆ ದಾಖಲೆ ಇದೆ. ಈಗ change ಮಾಡುವುದಕ್ಕೆ ಇದು ಇವರ ಸ್ವಂತ ಆಸ್ತಿಅಲ್ಲ. ಮನೆಯಲ್ಲಿ ಕುಳಿತುಕೊಂಡು ಬರೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಆದೇಶವಾಗಬೇಕಾದರೆ cabinet decision ಆಗಬೇಕು, cabinet ಮುಂದೆ ಬರಬೇಕು, ಯಾವ cabinet ನಲ್ಲಿಟ್ಟಿದ್ದೀರಿ ಸ್ವಾಮಿ? ಒಂದು cabinet decision ಹೇಳಿ? You cannot do as you like. You are the Minister for the State, you are not Minister for yourself. You should know that.

ಶ್ರೀ ಟಿ.ಬಿ. ಜಯಚಂದ್ರ :– ಬಹುಶಃ World Bank ಜೊತೆ ನೀವು ಒಂದು agreement ಮಾಡಿಕೊಂಡಿದ್ದು ಈಗ ಕೆಲಸ ಮುಗಿಯಬೇಕಾಗಿತ್ತು. ಅದರಲ್ಲಿ land acquisition ಆಗಿಲ್ಲವೆನ್ನುವ ಕಾರಣಕ್ಕಾಗಿ ಬದಲಾವಣೆ ಮಾಡುವುದಕ್ಕೆ ಅವಕಾಶವಿಲ್ಲ. Acquisition ಆಗದೇ ಇದ್ದರೆ ಅದು delay ಆಗಬಹುದು. ಆಗ ನೀವು ರಾಜ್ಯ ಸರ್ಕಾರದ ನಿಧಿಯಿಂದ complete ಮಾಡಬೇಕಾಗುತ್ತದೆ. ಈಗಾಗಲೇ ನೀವು 2ನೇ ಹಂತಕ್ಕೆ ಕಾಲಿಟ್ಟಿದ್ದಿರಿ. ಆದರೆ, ಈ ರೀತಿಯಾಗಿ ಏಕಾಏಕಿ 200–300 ಕಿಲೋ ಮೀಟರ್ ರಸ್ತೆಗಳನ್ನು ಬದಲಾವಣೆ ಮಾಡುವುದಕ್ಕೆ ಬಹುಶಃ World Bank ಒಪ್ಪುವುದಕ್ಕೆ ಸಾಧ್ಯವಿಲ್ಲ ಮತ್ತು ಒಪ್ಪಿಲ್ಲ. ಅದು ಸ್ವೇಚ್ಛೆಯಾಗಿ ಮಾಡಿರತಕ್ಕಂಥ ಕೆಲಸವಾಗುತ್ತದೆ. ಇದಕ್ಕೆ ನಿಮ್ಮ ಉತ್ತರವೇನು?

ಉಪಾಧ್ಯಕ್ಷರು :– ರಮಾನಾಥ ರೈರವರೆ, ತಾವು ಆಗಲೇ ಕೇಳಿದ್ದೀರಿ, ಅವರು ಈಗ ಉತ್ತರ ಕೊಡುತ್ತಾರೆ.

ಶ್ರೀ ಬಿ. ರಮಾನಾಥ ರೈ :– ಮಾನ್ಯ ಉದಾಸಿಯವರು ಬಹಳಷ್ಟು ವರ್ಷಗಳಿಂದ ಬರುತ್ತಿದ್ದು ಅವರಿಗೆ ಆ ರಸ್ತೆಯ ಪರಿಚಯ ಬಹಳ ಚೆನ್ನಾಗಿದೆ. ಅವರು ನಮ್ಮ ತುಳು ಭಾಷೆ ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾವು ಅವರ ಜೊತೆಯಲ್ಲಿ ತುಳು ಭಾಷೆಯಲ್ಲಿಯೇ ಮಾತನಾಡುತ್ತೇವೆ. ಅಷ್ಟು ಪರಿಪಕ್ವವಾದ ತುಳುಭಾಷೆಯನ್ನು ಮಾತನಾಡುತ್ತಾರೆ ಮತ್ತು ಅವರಿಗೆ ಮಂಗಳೂರಿನ ಪರಿಚಯ ಬಹಳ ಚೆನ್ನಾಗಿದೆ. ಅವರು ಖಂಡಿತವಾಗಿ ಅದೆಷ್ಟೋ ಸಲ ಮಂಗಳೂರಿನಿಂದ

ಬೆಳ್ತಂಗಡಿಗೆ ಹೋಗಿ ಧರ್ಮಸ್ಥಳಕ್ಕೆ ಹೋಗಿದ್ದಾರೆ. ನನಗೆ ಗೊತ್ತಿದೆ. ಆ ರಸ್ತೆಗೆ ಭೂ ಸ್ವಾಧೀನಕ್ಕೆ ಜಾಗ ಕೊಡುವಂಥದ್ದು ಕಷ್ಟವಿದೆಯೆಂದು ಯಾರಾದರೂ ಹೇಳಿದ್ದಾರೆಯೇ? ಇಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಇದ್ದಾರೆ, ಅವರು ಹೇಳಲಿ. ಅವರು ಭೂ ಸ್ವಾಧೀನ ಮಾಡುವುದಕ್ಕೆ ಜಾಗ ಇಲ್ಲವೆಂದು ಹೇಳಲಿ. (ಗೊಂದಲ) ಇದನ್ನು ದುರುದ್ದೇಶದಿಂದ ಮಾಡಿರತಕ್ಕಂಥದ್ದು.

(ಗೊಂದಲ)

ಉಪಾಧ್ಯಕ್ಷರು :– ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. ಅವರು ಉತ್ತರ ಕೊಡಲಿಕ್ಕೆ ಅವಕಾಶ ಕೊಡಿ. ಇಲ್ಲವೆಂದರೆ, ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಉತ್ತರ ಕೊಡುವುದಕ್ಕೆ ಅವಕಾಶ ಕೊಡದಿದ್ದರೆ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :– ನನಗೆ ಅಧಿಕಾರಿಗಳಿಂದ ಸಿಕ್ಕಿರುವ ವರದಿ ಪ್ರಕಾರ, World Bank ನ approval ನಲ್ಲಿ 3411 ಕಿಲೋ ಮೀಟರ್ ರಸ್ತೆಗೆ approval ಆಗಿದೆ. ಆದರೆ, ಹಣಕಾಸಿನ ಲಭ್ಯತೆ ಆಧಾರದ ಮೇಲೆ ನಾವು ಸೂಚನೆಗಳನ್ನು ಮಾಡಬಹುದು. ಸೂಚನೆಗಳನ್ನು ಮಾಡಬೇಕಾದಾಗ ಯಾವುದೇ ಅಡೆತಡೆಗಳಿಲ್ಲದೆ ರಸ್ತೆಗಳಿಗೆ ಸೂಚನೆ ಮಾಡಬೇಕೆಂದು ಬಂದ ಪ್ರಕಾರ ಆ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಈಗ ನಾವು ಮಾಡಿರುವಂಥ ರಸ್ತೆಗಳಿಗೆ ಕ್ಯಾಬಿನೆಟ್‌ನ ಅನುಮೋದನೆ ದೊರೆತು ಈ ಕೆಲಸ ಪ್ರಾರಂಭವಾಗುತ್ತಿದೆ. ಇದರ ಜೊತೆಗೆ ಉಳಿದ ಕೆಲಸ ಕಾರ್ಯಗಳನ್ನು ಸಹಿತ ಉಳಿದ 3411 ಕಿಲೋಮೀಟರ್ ಬಂದಿರುವಂಥ ಎಲ್ಲಾ ರಸ್ತೆಗಳನ್ನು ಸಹಿತ ಅಭಿವೃದ್ಧಿ ಮಾಡುತ್ತೇವೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ ಎನ್ನುವುದನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಧರ್ಮಸ್ಥಳ ರಸ್ತೆಯನ್ನೂ ಸಹ ಯಾವುದೇ ಕಾರಣಕ್ಕೂ ಕೈಬಿಡುವುದಿಲ್ಲವೆನ್ನುವುದನ್ನು ತಾವು ತಿಳಿದುಕೊಳ್ಳಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ರೇವಣ್ಣನವರು ನನಗೆ ಮಾತನಾಡಬೇಕಾದಾಗ ತಾವು ಸ್ವಲ್ಪ ಗಂಭೀರವಾಗಿ ತಾವು ಯಾವ ರೀತಿ ನಡೆದುಕೊಂಡಿರಿ ಎಂಬುದನ್ನೂ ತಾವು ನೋಡಿಕೊಂಡು ಮಾತನಾಡಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ಇದರ ಬಗ್ಗೆ ಹೇಳಿ ಎಂದು ಬೇರೆ ಏನೋ ಹೇಳುತ್ತೀರಿ. ನಿಮಗೆ ನಾಚಿಕೆಯಾಗುವುದಿಲ್ಲವೇ? 375 ಕಿಲೋ ಮೀಟರ್ ರಸ್ತೆಯನ್ನು ಬದಲಾವಣೆ ಮಾಡಿರುವುದು ನಿಮಗೆ ನಾಚಿಕೆಯಾಗಲ್ಲವೇ? (ಗೊಂದಲ) ಈ ಆದೇಶದ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ:– ಮಾನ್ಯ ರಮಾನಾಥ ರೈರವರ ಬಗ್ಗೆಯಾಗಲಿ, ರೇವಣ್ಣನವರ ಬಗ್ಗೆಯಾಗಲಿ ನನಗೆ ಅಪಾರ ಗೌರವವಿದೆ. ನಾನು ಹೀಗೆ ಹೇಳುತ್ತಿರಬೇಕಾದರೆ ರೇವಣ್ಣನವರ ಬಗ್ಗೆ ಗೌರವವಿಲ್ಲವೆಂದು ನೀವು ತಿಳಿದುಕೊಳ್ಳಬೇಡಿ. ರೇವಣ್ಣನವರ ಬಗ್ಗೆಯೂ ಅಷ್ಟೇ ಗೌರವವಿದೆ.

ಶ್ರೀ ಹೆಚ್.ಡಿ. ರೇವಣ್ಣ :– ನನ್ನ ಬಗ್ಗೆ ಗೌರವ ಇಟ್ಟುಕೊಳ್ಳಬೇಡಿ ಸರ್. (ಗೊಂದಲ) ನೀವು ಮಾತನಾಡುವಾಗ ವಿಷಯದ ಮೇಲೆ ಮಾತನಾಡಿ. ವಿಷಯವನ್ನು ಮುಚ್ಚಿಹಾಕುವುದಕ್ಕೆ ಹೋಗಬೇಡಿ. 585 ಕಿಲೋಮೀಟರ್ ರಸ್ತೆಯಲ್ಲಿ 372 ಕಿಲೋ ಮೀಟರ್ ರಸ್ತೆಯನ್ನು change ಮಾಡಿ ಶಿವಮೊಗ್ಗ ಜಿಲ್ಲೆಗೆ ಮಂಜೂರು ಮಾಡಿದ್ದೀರೋ ಇಲ್ಲವೋ ಎಂಬುದನ್ನು ದಯಮಾಡಿ ಸಭೆಗೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು :– ಮೊದಲು ಸಚಿವರು ಉತ್ತರ ಹೇಳುವುದನ್ನು ಕೇಳಿ. ನಂತರ ಬೇಕಾದರೆ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :– ನಾನು ಹಳೆಯದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾನೇನಾದರೂ ಈ ರಸ್ತೆಗಳನ್ನು ತೆಗೆದುಕೊಂಡಿದ್ದಿದ್ದರೆ 3411 ಕಿಲೋ ಮೀಟರ್ ರಸ್ತೆಗಳೇನಿವೆ, ಆ ರಸ್ತೆಗಳನ್ನು ಬಿಟ್ಟು ಯಾವುದಾದರೂ ಒಂದು ರಸ್ತೆಯನ್ನು ನಾನು ಬದಲಾವಣೆ ಮಾಡಿದ್ದೇನೆ ಎನ್ನುವುದಾದರೆ ಅವರು ನನಗೆ ಹೇಳಲಿ. ಅವರು ಸಾಬೀತು ಮಾಡಲಿ. (ಗೊಂದಲ) ಈ ಸದನದ ಸದಸ್ಯರೆಲ್ಲರಿಗೆ ಗೊತ್ತಿರಬೇಕು. 27 ಸಾವಿರ ಜನಸಂಖ್ಯೆ ಇರುವಂಥ ಹೊಳೆನರಸೀಪುರದಲ್ಲಿ ಒಂದು ring road ಅನ್ನು ಮಾಡುತ್ತಾರೆ. ಆ ring road ಗೆ 37 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕರ್ನಾಟಕದಲ್ಲಿ ಇವರು ಯಾವುದಾದರೂ ರಸ್ತೆಯನ್ನು ಮಾಡಿದ್ದಾರೆಯೇ?

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಅಧ್ಯಕ್ಷರು :– ಅವರು ಉತ್ತರ ಕೊಡಲಿಕ್ಕೆ ಅವಕಾಶ ಮಾಡಿಕೊಡಿ. ನೀವು ಕುಳಿತುಕೊಳ್ಳಿ ಅವರು ಕುಳಿತುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ :– ಹೊಳೆನರಸೀಪುರದಲ್ಲಿ 34 ಕೋಟಿ ರೂಪಾಯಿಯ ರಿಂಗ್ ರೋಡ್ ಆಗಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಅವರು ರಾಜೀನಾಮೆ ಕೊಡುತ್ತಾರೆಯೇ ಕೇಳಿ. ಅಧಿಕಾರಿಗಳು ಬರೆದುಕೊಟ್ಟಿರುವುದನ್ನು ನೀವು ಇಲ್ಲಿ ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಉಪಾಧ್ಯಕ್ಷರು :– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನೀವು ಈ ರೀತಿ ಮಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಹೇಳುತ್ತಿದ್ದೇನೆ, ಯಾವುದೂ ದಾಖಲು ಮಾಡಬೇಡಿ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಹಂತದಲ್ಲಿ ನಡವಳಿಕೆಯನ್ನು ದಾಖಲು ಮಾಡಿರುವುದಿಲ್ಲ)

ಉಪಾಧ್ಯಕ್ಷರು :– ಮಾನ್ಯ ಮಂತ್ರಿಗಳು ಉತ್ತರ ಹೇಳಲು ನಿಂತಿದ್ದಾರೆ. ಅವರು ಹೇಳಿದ ಮೇಲೆ ನೀವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ :– ಅದರಲ್ಲಿ ಅವರು ಬಿಟ್ಟು ಬಿಟ್ಟಿದ್ದಾರೆ. ಇದಕ್ಕೊಂದು ಸದನ ಸಮಿತಿ ಮಾಡಿ, ಆಗ ಎಲ್ಲಾ ಬಯಲಿಗೆ ಬರುತ್ತದೆ. ಅವರ ಈ ಕ್ರಮವನ್ನು ನಾವು ವಿರೋಧಿಸಿ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಜೆಡಿಎಸ್ ಸದಸ್ಯರು ಸದನದ ಬಾವಿಗೆ ಬಂಧು ಧರಣಿಯಲ್ಲಿ ನಿರತರಾದರು)

ಉಪಾಧ್ಯಕ್ಷರು :– ಮಾನ್ಯ ಮಂತ್ರಿಗಳೇ ನೀವು ಉತ್ತರ ಕೊಡಿ.

(ಗೊಂದಲ)

ಉಪಾಧ್ಯಕ್ಷರು :– ಯಾವುದೂ ದಾಖಲೆಗೆ ಹೋಗುವುದಿಲ್ಲ.

ಶ್ರೀ ಸಿ.ಎಂ.ಉದಾಸಿ :– 3411 ಕಿ.ಮೀ. ರಸ್ತೆಗಳನ್ನು ಬಿಟ್ಟು ಹೊಸ ರಸ್ತೆಗಳನ್ನು ನಾನು ತೆಗೆದುಕೊಂಡಿದ್ದಾರೆ ಅವರು ಸಾಬೀತು ಮಾಡಲಿ. ಇದನ್ನು ಮೊದಲು ಅವರು ಅರ್ಥ ಮಾಡಿಕೊಳ್ಳಲಿ.

(ಗೊಂದಲ)

ಉಪಾಧ್ಯಕ್ಷರು :– ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು :– ಮೊದಲು ಮಾನ್ಯ ಮಂತ್ರಿಗಳು ಉತ್ತರ ಹೇಳಲಿ, ನಂತರ ನೀವು ಕೇಳಿ.

ಶ್ರೀ ಸಿ.ಎಂ. ಉದಾಸಿ :– ಹಾಸನ ಜಿಲ್ಲೆಯಲ್ಲಿ ಕೆಆರ್‌ಡಿಸಿಎಲ್ ವತಿಯಿಂದ ಕೈಗೊಳ್ಳಲಾದ ಕಾಮಗಾರಿಗಳ ವಿವರ ತಮಗೆ ಹೇಳುವುದಾದರೆ, ಹಾಸನ ವರ್ತುಲ ರಸ್ತೆ ಇದರಲ್ಲಿ ಭೂಸ್ವಾಧೀನ ಸಹಿತವಾಗಿ 348 ಕೋಟಿ, ಹೊಳೆನರಸಿಪುರ ವರ್ತುಲ ರಸ್ತೆಗೆ 37 ಕೋಟಿ, ಚನ್ನರಾಯಪಟ್ಟಣ – ಅರಕಲಗೂಡು ರಸ್ತೆಗೆ 54 ಕೋಟಿ, ಹಾಸನ ವಿಮಾನ ನಿಲ್ದಾಣಕ್ಕೆ ರಸ್ತೆಗೆ 20 ಕೋಟಿ, ಸೇತುವೆ ನಿರ್ಮಾಣಕ್ಕೆ 56.79 ಕೋಟಿ, ಇತರೆ ರಸ್ತೆಗಳಿಗಾಗಿ 105 ಕೋಟಿ, ಒಟ್ಟಾರೆಯಾಗಿ 620.79 ಕೋಟಿ ರೂಪಾಯಿಗಳು.

ಉಪಾಧ್ಯಕ್ಷರು :– ದಯಮಾಡಿ ನೀವು ನಿಮ್ಮ ಸ್ಥಳಕ್ಕೆ ಹೋಗಿ. ಇಲ್ಲಿ ನಿಂತು ಮಾತನಾಡಿದರೆ ಹೇಗೆ? ದಯಮಾಡಿ ನೀವು ನಿಮ್ಮ ಸ್ಥಳಕ್ಕೆ ಹೋಗಿ.

ಶ್ರೀ ಸಿ.ಎಂ.ಉದಾಸಿ :– ಇದರ ಜೊತೆಗೆ ಹಾಸನ ವರ್ತುಲ ರಸ್ತೆ ಮೊದಲನೇ ಹಂತದ ಕಾಮಗಾರಿಗೆ ಒಟ್ಟು 506 ಎಕರೆ ಜಮೀನಿನ ಅಗತ್ಯವಿರುತ್ತದೆ. ಹಾಸನ ವರ್ತುಲ ರಸ್ತೆಗೆ 6 ಪಥಗಳ ರಸ್ತೆ ಮಾಡಬೇಕೆಂದು 781 ಎಕರೆ ಜಮೀನು ಬರಿ ರಿಂಗ್ ರೋಡ್‌ಗೆ ಬೇಕೆಂದು ಇವರು ಕೇಳುತ್ತಾರೆ. ಆದರೆ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕೆ 800 ಎಕರೆ ತೆಗೆದುಕೊಳ್ಳುವುದಕ್ಕೆ ಹೋದರೆ ಅದಕ್ಕೆ ಇವರು ವಿರೋಧ ಮಾಡುತ್ತಾರೆ. ಇದು ಕೇವಲ ರಿಂಗ್ ರೋಡ್‌ಗೆ 781 ಎಕರೆಗಳು. ಹಾಗಾದರೆ ಅಲ್ಲಿ ರೈತರು ಇಲ್ಲವಾ?

(ಗೊಂದಲ)

ಉಪಾಧ್ಯಕ್ಷರು :– ದಯವಿಟ್ಟು ನಿಮ್ಮ ಸ್ಥಳಗಳಿಗೆ ಹೋಗಿ. ಈಗ ವಿರೋಧ ಪಕ್ಷದ ನಾಯಕರು ನಿಂತಿದ್ದಾರೆ ಅವರು ಮಾತನಾಡಲಿ.

ಶ್ರೀ ಸಿ.ಎಂ.ಉದಾಸಿ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಾಗಲಿ ಎಂದು ಈ ವಿವರ ಕೊಡುತ್ತೇನೆ. ನಂತರ ಅವರು ಮಾತನಾಡಲಿ. ಕೆಆರ್‌ಡಿಸಿಎಲ್ ಪ್ರಾರಂಭವಾದಾಗಿನಿಂದ ಜನವರಿ 2009 ರವರೆಗೆ 2700 ಕೋಟಿ ರೂಪಾಯಿ ಕೆಲಸವಾಗಿದ್ದರೆ ಅದರಲ್ಲಿ ಹಾಸನ ಜಿಲ್ಲೆಗೆ 620 ಕೋಟಿ ರೂಪಾಯಿಯ ಕೆಲಸವಾಗಿದೆ. ಶೇಕಡ 23% ಹಾಸನ ಜಿಲ್ಲೆಗೆ ಮಾತ್ರ ಆಗಿದೆ. ಇದು ಏನು ತೋರಿಸುತ್ತದೆ? ನಾವು ಏನು ಹೊಸ ರಸ್ತೆ ಮಾಡಿಲ್ಲ. ನಾವು 3411 ಕಿ.ಮೀ.ರಸ್ತೆ ಏನು ಮೊದಲು ಗುರುತಿಸಿತ್ತು, ಅವುಗಳನ್ನೇ ನಾವು ತೆಗೆದುಕೊಂಡಿರುವುದು, ಬೇರೆ ರಸ್ತೆಗಳನ್ನು ತೆಗೆದುಕೊಂಡಿದ್ದಾರೆ ಅವರು ಮಾತನಾಡಲಿ. ಇದೆಲ್ಲಾ ಬಿಟ್ಟು ಸುಮ್ಮನೆ ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಲಿಕ್ಕೆ ದಯವಿಟ್ಟು ಹೋಗಬಾರದು ಎಂದು ನಾನು ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು :– ನೀವು ಇಲ್ಲಿ ನಿಂತುಕೊಂಡು ದಯವಿಟ್ಟು ಏನೂ ಮಾತನಾಡಬೇಡಿ.

ಶ್ರೀ ಸಿ.ಎಮ. ಉದಾಸಿ :– ಎಲ್ಲಕ್ಕಿಂತ ಪ್ರಮುಖವಾಗಿ, ರೇವಣ್ಣನವರೆ ದಯಮಾಡಿ ಕೇಳಿ. ಅಧಿಕಾರಿಗಳು ನನಗೆ ತಪ್ಪು ಮಾಹಿತಿ ಕೊಟ್ಟಿದ್ದರೆ ನನಗೆ ನೀವು ಗೈಟ್ ಮಾಡಿ.

(ಗೊಂದಲ)

ಅಧಿಕಾರಿಗಳು ನಿಮಗೂ ಮತ್ತು ನಮಗೂ ಅವರೇ ಮಾಹಿತಿ ಕೊಡುತ್ತಾರೆ. 2004 ರಿಂದ 2008 ನೇ ಸಾಲಿನಲ್ಲಿ ಇಡೀ ರಾಜ್ಯದಲ್ಲಿ ವಿವಿಧ ಶೀರ್ಷಿಕೆಯಡಿಯಲ್ಲಿ ಹಣ ಬಿಡುಗಡೆ ಮಾಡಿದ್ದು ಎಷ್ಟು? 4563 ಕೋಟಿ ಹಣ ಬಿಡುಗಡೆ ಮಾಡಿದರು. ಇದರಲ್ಲಿ 3029 ಕೋಟಿ ದಕ್ಷಿಣ ವಲಯಕ್ಕೆ ಮತ್ತು 1533 ಕೋಟಿ ಉತ್ತರ ವಲಯಕ್ಕೆ ಕೊಟ್ಟಿದ್ದಾರೆ. ಹಾಗಾದರೆ ದಕ್ಷಿಣ ವಲಯಕ್ಕೆ ಶೇಕಡ 67, ಉತ್ತರ ವಲಯಕ್ಕೆ ಶೇಕಡ 33.

(ಗೊಂದಲ)

ಹಾಸನ ಜಿಲ್ಲೆಗೆ ಹಂಚಿಕೆಯಾಗಿರುವುದು 325 ಕೋಟಿ ರೂಪಾಯಿ, ಇದರಲ್ಲಿ ಹೊಳೆನರಸೀಪುರ ತಾಲ್ಲೂಕಿಗೆ 90 ಕೋಟಿ ಹಂಚಿಕೆಯಾಗಿರುತ್ತದೆ. ರಾಮನಗರ ಜಿಲ್ಲೆಗೆ ಹಂಚಿಕೆಯಾಗಿರುವುದು 282 ಕೋಟಿ ರೂಪಾಯಿ, ಇದರಲ್ಲಿ ರಾಮನಗರ ತಾಲ್ಲೂಕಿಗೆ 126 ಕೋಟಿ ಹಂಚಿಕೆಯಾಗಿರುತ್ತದೆ. ಹಾಗೆಯೇ ತುಮಕುರು ಜಿಲ್ಲೆಗೆ 253 ಕೋಟಿ ಮತ್ತು ಮಂಡ್ಯ ಜಿಲ್ಲೆಗೆ 295 ಕೋಟಿ ಹಂಚಿಕೆಯಾಗಿರುತ್ತದೆ. ಆದರೆ, ನಂಜುಂಡಪ್ಪ ವರದಿ ಅನ್ವಯ ಹಿಂದುಳಿದ ತಾಲ್ಲೂಕುಗಳಾದ ದೇವದುರ್ಗ ತಾಲ್ಲೂಕಿಗೆ 17 ಕೋಟಿ 85 ಲಕ್ಷ, ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿಗೆ ಕೇವಲ 9 ಕೋಟಿ 46 ಲಕ್ಷ, ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿಗೆ ಕೇವಲ 13 ಕೋಟಿ 93 ಲಕ್ಷ ಮತ್ತು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿಗೆ ಕೇವಲ 33 ಕೋಟಿ 31 ಲಕ್ಷ ರೂಪಾಯಿ. ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕುಗಳಿಗೆ ಹೋಲಿಸಿದಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳಿಗೆ ಏನು ಮಾಡಿದ್ದಾರೆಂಬುದನ್ನು ಮುಂದೆ ಹೇಳುತ್ತೇನೆ. ಗದಗ ಜಿಲ್ಲೆ 18 ವಿಧಾನ ಸಭಾ ಕ್ಷೇತ್ರಗಳಿದ್ದಲ್ಲಿ 88 ಕೋಟಿ 47 ಲಕ್ಷ ರುಪಾಯಿಗಳು. ಒಂದು ವಿಧಾನ ಸಭಾ ಕ್ಷೇತ್ರಕ್ಕೆ 90 ಕೋಟಿ ತೆಗೆದುಕೊಂಡಿರುವಂಥವರು ಕಾರವಾರ ಜಿಲ್ಲೆಗೆ 86 ಕೋಟಿ 29 ಲಕ್ಷ, ಬೆಳಗಾಂ ಜಿಲ್ಲೆಗೆ 86 ಕೋಟಿ 29 ಲಕ್ಷ ಇದ್ದರೆ ಹೊಳೆನರಸೀಪುರಕ್ಕೆ 90 ಕೋಟಿ 44 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇದನ್ನು ತಾವು ನೋಡಿದರೆ ಎಲ್ಲಿ ವ್ಯತ್ಯಾಸವಾಗಿದೆ ಎಂಬುದು ಗೊತ್ತಾಗುತ್ತದೆ.

ಉಪಾಧ್ಯಕ್ಷರು :– ದಯವಿಟ್ಟು ತಾವು ಅಲ್ಲಿ ನಿಂತು ಯಾರು ಮಾತನಾಡಬೇಡಿ. ತಾವು ಉತ್ತರ ಮುಗಿಸಿ.

ಶ್ರೀ ಸಿ.ಎಂ. ಉದಾಸಿ :– 2004–05 ರಿಂದ 2007–08 ರವರೆಗೆ ಕ್ಷೇತ್ರವಾರು ವಿವರ ಹೇಳುವುದಾದರೆ, 2005–06 ರಲ್ಲಿ ರಾಮನಗರ ಕ್ಷೇತ್ರಕ್ಕೆ ಅಪೆಂಡಿಕ್ಸ್–ಇ ನಲ್ಲಿ 660 ಲಕ್ಷ ಕೊಟ್ಟಿದ್ದರೆ ಅತಿ ಹಿಂದುಳಿದ ತಾಲ್ಲೂಕುಗಳಾದ ಗುಬ್ಬಿಗೆ 26 ಲಕ್ಷ.

ಉಪಾಧ್ಯಕ್ಷರು :– ಬಾವಿಯಲ್ಲಿ ನಿಂತು ಮಾತನಾಡುವುದನ್ನು ಯಾವುದೂ ದಾಖಲು ಮಾಡಬೇಡಿ.

ಶ್ರೀ ಸಿ.ಎಂ. ಉದಾಸಿ :– ಅದೇ ರೀತಿ ಶಿರಾಕ್ಕೆ 27 ಲಕ್ಷ, ಚಾಮರಾಜನಗರ ಕ್ಕೆ 18 ಲಕ್ಷ, ಚಿತ್ತಾಪುರಕ್ಕೆ 20 ಲಕ್ಷ, ದೇವದುರ್ಗಕ್ಕೆ 53 ಲಕ್ಷ, ಕೊಡಲಾಗಿದೆ. ನಾವು ಕೂಡ ಇದನ್ನು ಸರಿಪಡಿಸುವ ಪ್ರಯತ್ನದಲ್ಲಿ ನಾನೇನು ಹೊಸ ರಸ್ತೆಗಳನ್ನು ಯಾವುದೂ ತೆಗೆದುಕೊಳ್ಳಲಿಕ್ಕೆ ಹೋಗಿಲ್ಲ. 3411 ಕಿ.ಮೀ. ರಸ್ತೆ ಏನು ಇತ್ತು ಅದನ್ನೇ ಗುರುತಿಸಿ ತೆಗೆದುಕೊಂಡಿದ್ದೇವೆಯೇ ಹೊರತು ಯಾವುದೂ ರದ್ದು ಮಾಡುವುದಕ್ಕೆ ಹೋಗಿಲ್ಲ, ಹೊಸದನ್ನು ಸೇರಿಸಲಿಕ್ಕೆ ಹೋಗಿಲ್ಲ ಎನ್ನುವ

ಮಾತನ್ನು ಅತ್ಯಂತ ಗೌರವ ಪೂರ್ವಕವಾಗಿ ಮಾನ್ಯ ರೇವಣ್ಣನವರಿಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ಸಚಿವರು. ಉತ್ತರ ಮುಗಿಯಲಿ ಆನಂತರ ತಾವು ಮಾತನಾಡಿ.

ಶ್ರೀ ಸಿ.ಎಂ. ಉದಾಸಿ:– ಮಾನ್ಯ ಉಪಾಧ್ಯಕ್ಷರೆ, ಉಳಿದ ರಸ್ತೆಗಳನ್ನು ತೆಗೆದುಕೊಳ್ಳುವ ಕೆಲಸವನ್ನು ಅತೀ ಶೀಘ್ರದಲ್ಲಿ ಮಾಡುವುದಕ್ಕೆ ಹೊರಟಿದ್ದೇವೆ. ನಿಮಗೆ ಅನ್ಯಾಯ ಮಾಡಬೇಕೆಂದು ನಮಗೆ ಮನಸ್ಸಿಲ್ಲ. ಎಲ್ಲಿ ವ್ಯತ್ಯಾಸವಾಗಿದೆ. ಎಲ್ಲಿ ರೀಜನಲ್ ಇಂಬ್ಯಾಲೆನ್ಸ್ ಆಗಿದೆ, ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ. ಆದ್ಯತೆ ಕೊಡುವಾಗ hurolses ಆಗಿರುವುದನ್ನು ಬಿಟ್ಟು ಉಳಿದವುಗಳನ್ನು ಮಾಡಿ ಎಂದು ಅವರಿಗೆ ಸೂಚನೆ ಕೊಟ್ಟ ಪ್ರಕಾರ ಈ ರಸ್ತೆಗಳನ್ನು ಆಯ್ಕೆ ಮಾಡಲಾಗಿದೆ. ಆದ್ದರಿಂದ, ಇದಕ್ಕೆ ಬೇರೆ ಅರ್ಥ ಕಲ್ಪಿಸಬಾರದೆಂದು ವಿನಯಪೂರ್ವಕವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ಈಗ ನಮಗೇನುತೊಂದರೆಯಾಗಿದೆ ಎಂದರೆ, ಮಾನ್ಯ ರೇವಣ್ಣನವರೇ ಮಾಡಿರತಕ್ಕಂಥದ್ದನ್ನು ಅವರು ಹೇಳುತ್ತಾರೆ. ಮತ್ತೆ ಅವರು ಹೇಳಿದ್ದನ್ನು ಇವರು ಹೇಳುತ್ತಾರೆ. ಈ ಮಧ್ಯದಲ್ಲಿ ಏನಾಗಿದೆ ಎಂದರೆ, ನಿಜವಾದ sufferers ನಾವಾಗಿದ್ದೇವೆ. ಯಾವ್ಯಾವ ಜಿಲ್ಲೆಗಳಲ್ಲಿ ಅಥವಾ ತಾಲ್ಲೂಕುಗಳಲ್ಲಿ ರಸ್ತೆಗಳು ಕೆಟ್ಟು ಹೋಗಿವೆಯೋ ಆ ರಸ್ತೆಗಳ ಬಗ್ಗೆ ಸರ್ಕಾರ ನಿಜವಾಗಿಯೂ ಕೂಡ ಗಮನ ಕೊಟ್ಟಿಲ್ಲ ಅವರು ಏನೇನು ತಾರತಮ್ಯ ಮಾಡಿದ್ದಾರೆ ಎಂಬುದರ ಬಗ್ಗೆ ತಾವು ಆಪಾದನೆ ಮಾಡುತ್ತಿದ್ದೀರಿ. ನೀವು ಯಾವ ರೀತಿ ಮಾಡುತ್ತಿದ್ದೀರೆಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಶಿವಮೊಗ್ಗ ಜಿಲ್ಲೆ ಒಂದರಲ್ಲಿಯೇ 170 ಕಿ.ಮೀ ರಸ್ತೆ ಕೆಲಸ ತೆಗೆದುಕೊಂಡಿದ್ದೀರಿ. ಮತ್ತೆ ಹಾವೇರಿಯಲ್ಲಿ ಸುಮಾರು 36–37 ಕಿ.ಮೀ. ತೆಗೆದುಕೊಂಡಿದ್ದೀರಿ. ಆದರೆ, ಈ ರಸ್ತೆಗಳಿಗಿಂತ ಕೆಟ್ಟ ರಸ್ತೆಗಳ ಬಗ್ಗೆ ನಾನು ಸತತವಾಗಿ ಅಂದರೆ, ಈ ಸಾಲಿನಲ್ಲಿ ಮತ್ತು ಹಿಂದೆ ಸಮ್ಮಿಶ್ರ ಸರ್ಕಾರ ಇದ್ದಂಥ ಸಂದರ್ಭದಲ್ಲಿಯೂ ಕೂಡ ಹೇಳಿದ್ದೇನೆ. ವಾಗ್ಟರಿ ಯಿಂದ ರಿಬ್ಬನ್‌ಪಲ್ಲಿ ರಸ್ತೆಗಳು, ಈ ರಸ್ತೆಗಳು ನನ್ನ ಕ್ಷೇತ್ರಕ್ಕೆ ಬರುವುದಿಲ್ಲ. ಇನ್ನೊಂದು ಅಳಂದೂರು ರಸ್ತೆ ಮತ್ತು ಗುಲ್ಬರ್ಗದಲ್ಲಿ ಮಾನ್ಯ ರೇವುನಾಯಕ್ ಬೆಳಮಗಿ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ರಸ್ತೆ ಮತ್ತು ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರ ಕ್ಷೇತ್ರದಲ್ಲಿನ ರಸ್ತೆ ಮತ್ತೆ ಗುಲ್ಬರ್ಗಾದಿಂದ ರಾಯಚೂರು ಮತ್ತು ವಾಡಿಯವರೆಗಿನ ರಸ್ತೆಯನ್ನು private partnership ನಲ್ಲಿ ನಾನು ಮಾಡಿಸಿದ್ದೇನೆ. ಇದು ನಿಮಗೂ ಕೂಡ ಗೊತ್ತಿದೆ. ಈ ರಸ್ತೆಗೆ 25 ಕೋಟಿ ರೂಪಾಯಿ ಕಾಂಟ್ರಿಬ್ಯೂಷನ್‌ನ್ನು ACC ಫ್ಯಾಕ್ಟರಿಯಿಂದ ಮತ್ತೆ ಬೇರೆ ಬೇರೆ ಫ್ಯಾಕ್ಟರಿಯಿಂದ ಸುಮಾರು 30ರಿಂದ 40 ಕೋಟಿ ರೂಪಾಯಿಗಳನ್ನು ಅವರಿಂದ ಕೊಡಿಸಿ ಮತ್ತೆ ಇದಕ್ಕೆ ಸರ್ಕಾರ ಕೂಡ 50%ನಷ್ಟು ಹಾಕಿ ಸುಮಾರು 80–90

LCV.K.28

ಕೋಟಿ ರೂಪಾಯಿ ವೆಚ್ಚದಲ್ಲಿ ಆ ರಸ್ತೆಯನ್ನು ಮಾಡಿಸಲಾಗಿದೆ. ಉಳಿದ ರಸ್ತೆಯನ್ನು ಸೇರಿಸಿ ಕೆಲಸ ಮಾಡಿ ಎಂದು ನಾವು ಹೇಳಿದರೂ ಕೂಡ ಅದನ್ನು ಬದಲಾವಣೆ ಮಾಡುವುದಕ್ಕೆ ನಿಮಗೆ ಪುರಸೊತ್ತು ಇಲ್ಲ. ಮತ್ತೆ ಇದಕ್ಕೆ ನೂರೆಂಟು ಕಾನೂನಿನ ಅಡಚಣೆಗಳು ಇವೆ ಎಂದು ನಮಗೆ ಹೇಳುತ್ತಿದ್ದಿರಿ. ಇದು ಕೂಡ ನನ್ನ ಕ್ಷೇತ್ರಕ್ಕೆ ಸೇರಿರಲಿಲ್ಲ. ಈ ಎರಡು ರಸ್ತೆಗಳ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ಆದರೆ, ಈ ರಸ್ತೆಗಳು ನನ್ನ ಕ್ಷೇತ್ರಕ್ಕೆ ಸೇರಿಲ್ಲ. ಆದರೆ, ಈಗ ಒಂದು ರಸ್ತೆಯಲ್ಲಿ ಅರ್ಧ ಭಾಗ ಮಾತ್ರ ನನಗೆ ಬಂದಿದೆ. ಮೊದಲು ಬೇರೆ ಕ್ಷೇತ್ರದಲ್ಲಿತ್ತೆಂದು ತಮಗೂ ಕೂಡ ಗೊತ್ತಿದೆ. ಇವತ್ತಿನ ದಿವಸ irrespective ಆಗಿ ಯಾವುದೇ ಶಾಸಕರಿರಲಿ, ಕ್ಷೇತ್ರವಾರು ತೆಗೆದುಕೊಂಡು ಹೋದರೆ ಕೊನೇಪಕ್ಷ ಒಂದು ಒಳ್ಳೆಯ ಕಮ್ಯುನಿಕೇಷನ್ ಆಗುತ್ತದೆ. ನಿಮ್ಮ ವಿಶ್ವ ಬ್ಯಾಂಕ್ ನಾರ್ಮ್ಸ್ ಪ್ರಕಾರ ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಮತ್ತು ಜಿಲ್ಲೆಯಿಂದ ಜಿಲ್ಲಾ ಕೇಂದ್ರಕ್ಕೆ ರಸ್ತೆ ಮಾಡುವುದಕ್ಕೆ 1st Phase ನಲ್ಲಿ 4200 ಕೋಟಿ ರೂಪಾಯಿಗೆ ಅಪ್ರೂವಲ್ ಆಯಿತು. ಅಪ್ರೂವಲ್ ಆದಮೇಲೆ 1st phase ನ ಕೆಲಸ ಬಹಳ ಚೆನ್ನಾಗಿ ಆಗಿದೆ ಎಮಬ ವರದಿಯ ಆಧಾರದ ಮೇಲೆ 2ನೇ Phase ಅನ್ನು ನೀವು ತೆಗೆದುಕೊಳ್ಳಬೇಕೆಂದು ನಿಮಗೆ ಅವಕಾಶ ಮಾಡಿಕೊಟ್ಟರು. ಆದರೆ, ನೀವು ಏನು ಮಾಡಿದ್ದೀರೆಂದರೆ, ನಿಮಗೆ ಎಲ್ಲೆಲ್ಲಿ ಬೇಕಾಗಿದೆಯೋ ಅಂಥ ಕಡೆ ಬದಲಾವಣೆ ಮಾಡಿಕೊಂಡಿದ್ದೀರಿ. ಉದಾಹರಣೆಗೆ ಹೇಳುವುದಾದರೆ, ಬಂಟ್ವಾಳ ದಿಂದ ಬೆಳ್ತಂಗಡಿ ರಸ್ತೆ ಎಷ್ಟು ಕೆಟ್ಟಿದೆ ಎನ್ನತಕ್ಕಂಥದ್ದು ನಿಮಗೆ ಗೊತ್ತಿದೆ.

ಶ್ರೀ ರೇಣುಕಾಚಾರ್ಯ :– ಎಲ್ಲರ ಕಾಲದಲ್ಲಿಯೂ ಕೂಡ ಆಗಿದೆ. ..

(ಗೊಂದಲ)

ಡಾ:ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಊರ ಜನರಿಗೆಲ್ಲರಿಗೂ ಗೊತ್ತಿದೆ ಸುಮ್ಮನೆ ಕುಳಿತುಕೊಳ್ಳಿ. ಎಲ್ಲದಕ್ಕೂ ಎದ್ದು ಎದ್ದು ಮಾತನಾಡುವುದಕ್ಕೆ ಹೋಗಬೇಡಿ. ಈಗ ಅವರು ಮಾತನಾಡುತ್ತಿದ್ದಾರೆ, ನೀವು ಸುಮ್ಮನೆ ಕುಳಿತುಕೊಳ್ಳಿ. ಎಲ್ಲಾ ವಿಷಯದ ಮೇಲೆ ನೀವು ಮಾತನಾಡುವುದಕ್ಕೆ ನೀವೇನು ಮುಖ್ಯ ಮಂತ್ರಿಯಾಗಿದ್ದೀರಾ?

(ಗೊಂದಲ)

ಉಪಾಧ್ಯಕ್ಷರು :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೇಣುಕಾಚಾರ್ಯರವರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಅವರಿಗೆ ಸಮಾಧಾನಪಡಿಸುವುದಕ್ಕಾದರೂ ಒಂದು ಸದನ ಸಮಿತಿ ಮಾಡಿ. ಮಾನ್ಯ ಧರ್ಮಸಿಂಗ್ ಮತ್ತು ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಏನಾದರೂ discrimination ಆಗಿದ್ದರೆ ಅದು ಕೂಡ ಹೊರಕ್ಕೆ ಬರಲಿ. ಮತ್ತೆ ಮಾನ್ಯ ರೇವಣ್ಣ

ಮತ್ತು ಮಾನ್ಯ ಕುಮಾರಸ್ವಾಮಿ ಕಾಲದಲ್ಲಿ ಅಗಿರತಕ್ಕಂಥದ್ದು ಕೂಡ ಹೊರಕ್ಕೆ ಬರಲಿ. ಹಾಗೆಯೇ, ಇವತ್ತಿನದು ಕೂಡ ಹೊರಕ್ಕೆ ಬರಲಿ. ಆದ್ದರಿಂದ, ಒಂದು ಸದನ ಸಮಿತಿ ಮಾಡಿ, ಇದಕ್ಕೆ ನಾವು ಕೂಡ ಒಪ್ಪುತ್ತೇವೆ. ನಿಮ್ಮ ನಾರ್ಮ್ಸ್ ಪ್ರಕಾರ ಏನು ಮಾಡಬೇಕೆಂದು ನಿಮ್ಮ ಪ್ರೊಸೀಡಿಂಗ್ಸ್‌ನಲ್ಲಿ ಎಲ್ಲಾ ಇದೆ. ಹಿಂದೆ ಆಗಿರತಕ್ಕಂಥವುಗಳು ಬಹಳ ಚೆನ್ನಾಗಿ ಆಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರುವುದು ಪ್ರೊಸೀಡಿಂಗ್ಸ್‌ನಲ್ಲಿದೆ. ಇದರ ಆಧಾರದ ಮೇಲೆ ಎರಡನೆಯದಕ್ಕೆ ಪ್ರಸ್ತಾವನೆ ಕೊಡತಕ್ಕಂಥದ್ದಕ್ಕೆ ಪ್ರಾರಂಭವಾಯಿತು. ಆದರೆ, ಬದಲಾವಣೆ ಮಾಡುವಾಗ ಅವಶ್ಯಕತೆ ಇರತಕ್ಕಂಥ ಕಡೆ ತಾವು ನೋಡಬೇಕಾಗುತ್ತದೆ. ಆದರೆ, ಒಂದು ಸಾರಿ ಕೊಟ್ಟಮೇಲೆ ಪುನ: ನಿಮಗೆ ಬೇಕಾದಂಥ ರೀತಿಯಲ್ಲಿ ಬದಲಾವಣೆ ಮಾಡತಕ್ಕಂಥದ್ದು ಅನ್ಯಾಯವೆಂದು ಹೇಳುತ್ತೇನೆ. ನೀವು ಈಗ ಕೆಲವು ಅಂಕಿ-ಅಂಶಗಳನ್ನು ಹೇಳಿದ್ದೀರಿ. ಆದರೆ, ಇದನ್ನು ಮಾನ್ಯ ರೇವಣ್ಣನವರು ಮಾಡಿದ್ದಾರೆಂದು ಅವರನ್ನು ಸಮರ್ಥನೆ ಮಾಡಿಕೊಂಡು ಹೇಳುತ್ತಿಲ್ಲ. ಅವರ ಕಾಲದಲ್ಲಿ ಅನ್ಯಾಯವಾದಾಗಲೂ ನಾನು ಹೋರಾಟ ಮಾಡಿದ್ದೇನೆ ಮತ್ತೆ ನಬಾರ್ಡ್ ಯೋಜನೆಗಳಲ್ಲಿ ಕೆಲವು ಅನ್ಯಾಯವಾಗಿದ್ದಂಥವುಗಳ ಬಗ್ಗೆ ನಾನು ಬಹಿರಂಗವಾಗಿ ಹೇಳಿದ್ದೇನೆ. ಅಂದರೆ, ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಮ್ಮ ನೋಟ್‌ನ್ನು PWD ಯವರದು ತೆಗೆದು ನೋಡಿದರೆ ಗೊತ್ತಾಗುತ್ತದೆ. ಆದರೆ, ಒಬ್ಬರು discriminate ಮಾಡಿದರು, ಮತ್ತೊಬ್ಬರು ತಪ್ಪು ಮಾಡಿದರೆ, ಅದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ನಾನು ಇನ್ನೊಂದು ತಪ್ಪು ಮಾಡುತ್ತೇನೆಂದು ಹೇಳತಕ್ಕಂಥದ್ದು ನ್ಯಾಯವೇ? ಇದು ಸರ್ಕಾರ ನಡೆಸತಕ್ಕಂಥ ಕ್ರಮವೇ? ಇದನ್ನು ಸರಿಪಡಿಸುತ್ತೇನೆಂದು ಮತ್ತು ಎಲ್ಲಿ ನಿಜವಾಗಿಯೂ ಅವಶ್ಯಕತೆ ಇದೆಯೋ ಅಂಥ ಜಿಲ್ಲೆಗಳಿಗೆ ನಾವು ಪ್ರಾಧನ್ಯತೆ ಕೊಡುತ್ತೇವೆಂದು ಹೇಳಿ. ಆದರೆ, ಇದೇನಾಗಿದೆ ಎಂದರೆ, ಒಂದು ರೀತಿಯಲ್ಲಿ ಬಫೆ ಸಿಸ್ಟಮ್ ಟೈಪ್ ಆಗಿದೆ. ಯಾರಿಗೆ ಎಷ್ಟು ಸಿಗುತ್ತದೆಯೋ ಅಷ್ಟನ್ನು ಹಂಚಿಕೊಂಡು ಹೋಗತಕ್ಕಂಥ ಕೆಲಸವಾಗಿದೆ. ಅವರಿಗೆ ಸಿಕ್ಕಾಗ 1000 ಕಿ.ಮೀ. ಅವರು ಮಾಡಿಕೊಂಡರು. ಈಗ ನಿಮ್ಮ ಕೈಗೆ ಸಿಕ್ಕಿರುವಾಗ ನಾವೇಕೆ ಮಾಡಬಾರದೆಂಬ ವಾದ ನಿಮ್ಮದಾಗಿದೆ. ನೀವು ಸಮರ್ಥನೆ ಮಾಡುವುದನ್ನು ನೋಡಿದರೆ ನಾವೇಕೆ ಮಾಡಬಾರದೆಂಬ ವಾದ ನಿಮ್ಮದಾಗಿದೆ. ನೀವು ಸಮರ್ಥನೆ ಮಾಡುವುದನ್ನು ನೋಡಿದರೆ ನಾವೇಕೆ ಮಾಡಕೊಳ್ಳಬಾರದು ಎಂಬ ರೀತಿಯಲ್ಲಿದೆ. ಇಡೀ ರಾಜ್ಯದ ಎಲ್ಲಾ ಅಭಿವೃದ್ಧಿ ಕೆಲಸ ಮಾಡತಕ್ಕಂಥ ವಿಚಾರ ಇದಾಗಿಲ್ಲ. ಇದು ಕೇವಲ ತಾತ್ಪೂರ್ತಿಕವಾಗಿ ನಿಮ್ಮ ego ವನ್ನು satisfy ಮಾಡಿಕೊಳ್ಳುವುದಕ್ಕೋಸ್ಕರ ಹೇಳತಕ್ಕಂಥ ಮಾತುಗಳಾಗಿವೆ. ಆದ್ದರಿಂದ, ನಿಮಗೆ ಅನ್ಯಾಯವಾಗಿದೆ ಎಂದು ನಿಮ್ಮ ಮನಸ್ಸಿಗೆ ಅನಿಸಿದರೆ ತಕ್ಷಣ ದಯವಿಟ್ಟು ಒಂದು ಕಮಿಟಿ ಮಾಡಿ, ಯಾರ್ಯಾರ ಕಾಲದಲ್ಲಿ ಏನಾಗಿದೆಯೋ ಅದನ್ನು ಹೊರಕ್ಕೆ ತರಲಿ. ಆದರೆ, ಇದನ್ನು ಬದಲಾವಣೆ ಮಾಡತಕ್ಕಂಥ ಪ್ರಮೇಯ ನಿಮಗೆ ಇರಲಿಲ್ಲ. ನಿಮ್ಮ

ಕ್ಷೇತ್ರದಲ್ಲಿ ಅನೇಕವುಗಳನ್ನು ನೀವು ಮಾಡಿಕೊಂಡಿದ್ದಿರಿ. ಅಂದರೆ, maintenance ನಲ್ಲಿ ಮತ್ತು ಸಿ.ಆರ್.ಎಫ್.ನಲ್ಲಿ, 3054 ಹೆಡ್‌ನಲ್ಲಿ ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಮಾಡಿಕೊಂಡಿದ್ದೀರಿ. ನೀವಿಬ್ಬರೇ ಇದ್ದರೆ ಸರ್ಕಾರವಾಗುವುದಿಲ್ಲ. ನೀವು ಗೆದ್ದು ಬರಬೇಕಾದರೂ ಕನಿಷ್ಟ 120 ರಿಂದ 130 ಸೀಟ್‌ಗಳು ಬೇಕು. ಆದ್ದರಿಂದ, ನೀವು ರಾಜ್ಯದಲ್ಲಿ ದಯವಿಟ್ಟು ಈ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ. ಈ ರೀತಿಯಾಗಿ ತಪ್ಪು ಮಾಡುತ್ತಾ ಹೋದರೆ ಮುಂದೆ ಬರತಕ್ಕಂಥವರು ಇದನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ.

ಶ್ರೀ ಎ.ಮಂಜು :– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರು ಸ್ಪಷ್ಟವಾಗಿ ಎಲ್ಲವನ್ನೂ ಹೇಳಿದ್ದಾರೆ. ಆದ್ದರಿಂದ, ಮಾನ್ಯ ಮಂತ್ರಿಯವರಲ್ಲಿ ನಾವು ಕೇಳುವುದೇನೆಂದರೆ, ಅವರು ಮಾಡಿದ್ದಾರೆಂದು ಇವರು ಮಾಡುವುದರಿಂದ ನಮ್ಮಂಥ ಬಡ ತಾಲ್ಲೂಕಿಗೆ ಅನ್ಯಾಯವಾಗುತ್ತದೆ. ಇವರು ಯಾವ ಉದ್ದೇಶ ಇಟ್ಟುಕೊಂಡು ಮಾಡಿದ್ದಾರೆಯೋ ಅದೇ ರೀತಿಯಾಗಿ ಮಾಡುತ್ತೇವೆಂದು ತಾವು ಹೇಳತಕ್ಕಂಥ ಉತ್ತರವನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ. ಮತ್ತೆ 2nd Phaseಗೆ ಅನುಮೋದನೆ ಕೊಟ್ಟಿರತಕ್ಕಂಥದ್ದರಲ್ಲಿ ಬದಲಾವಣೆ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲ. ಆದ್ದರಿಂದ, ಮೊದಲು ಏನಿತ್ತೋ ಅದರಂತೆಯೇ ನೀವು ದಯವಿಟ್ಟು ಅನುಮೋದನೆಯನ್ನು ಮಾಡಬೇಕು. ಬದಲಾವಣೆ ಮಾಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿಲ್ಲ. ಆದ್ದರಿಂದ, ವೈಯಕ್ತಿಕವಾಗಿ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲ. ಮಾನ್ಯ ಮಂತ್ರಿಗಳು ನೀಡಿರುವ ಹೇಳಿಕೆಯನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಉಪಾಧ್ಯಕ್ಷರು :– ಅವರು ಮೊದಲು ಉತ್ತರ ಕೊಡಲಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷರು :– ನೀವು ಇಷ್ಟ ಬಂದಾಗ ಸದನ ಬಾವಿಗೆ ಬರುತ್ತೀರಿ ಮತ್ತೆ ಮಾತನಾಡುವುದಕ್ಕೆ ನಿಮ್ಮ ಸ್ಥಾನಕ್ಕೆ ಹೋಗುತ್ತೀರಿ. ಆದ್ದರಿಂದ, ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಟ್ಟಿಲ್ಲ. ಈಗ ಆ ಪ್ರಶ್ನೆಯನ್ನು ಮುಕ್ತಾಯಮಾಡುತ್ತೇನಷ್ಟೇ. ತಾವು ದಯವಿಟ್ಟು ಉತ್ತರ ಕೊಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಎ.ಮಂಜುರವರು ಮತ್ತು ಮಾನ್ಯ ಬಿ.ರಮಾನಾಥ್‌ರೈ ರವರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಶ್ರೀ ಸಿ.ಎಂ.ಉದಾಸಿ:– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕಂಥ ಮಾತುಗಳನ್ನು ನಾನು ಬಹಳ

ಗಂಭೀರವಾಗಿ ಗಮನಿಸಿದ್ದೇನೆ. ಯಾರಿಗೂ ಕೂಡ ತಾರತಮ್ಯ ಆಗಬಾರದೆಂಬ ಬಗ್ಗೆ ಎರಡು ಮಾತಿಲ್ಲ ಎಂಬ ಬಗ್ಗೆ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಏನು ಹೇಳಿದ್ದೇನೆಂದರೆ, ಈಗ 3411 ಕಿ.ಮೀ.ರಸ್ತೆಗಳು ಏನಿವೆ, ಆ ರಸ್ತೆಗಳನ್ನು ಹೊರತುಪಡಿಸಿ ಬೇರೆ ಯಾವುದನ್ನು ನಾವು ಮಾಡಿಲ್ಲ. (ಗೊಂದಲ) ಎರಡನೇ ಸಲ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಆ ರಸ್ತೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಅವರು ವಾಗಝರಿ ಮತ್ತು ರಿಬ್ಬನ್‌ಪಲ್ಲಿ ರಸ್ತೆಯ ಬಗ್ಗೆ ಹೇಳಿದರು. ಅದಕ್ಕೆ ಇವತ್ತೇ DCF ನಲ್ಲಿ ಕೊನೆಯ ದಿವಸ ಇದೆ. ಮೂರು ರಸ್ತೆಗಳನ್ನು ತೆಗೆದುಕೊಂಡಿರುವುದರಲ್ಲಿ ಇದೊಂದು ರಸ್ತೆ ಇದೆ. ಟೆಂಡರ್ ಹಾಕುವುದಕ್ಕೆ ಇವತ್ತೇ 27ನೇ ತಾರೀಖು ಕೊನೆಯ ದಿವಸ ಇತ್ತು. ಇದು ಫೈನಲ್ ಇದ್ದು, ಇದರಲ್ಲಿ ನಾಲ್ಕಾರು ಜನ ಭಾಗಿಯಾಲಿಕ್ಕೆ ಬಂದಿದ್ದಾರೆ. ಈ ವಾಗ್‌ಝರಿ – ರಿಬ್ಬನ್‌ಪಲ್ಲಿ ರಸ್ತೆ ಆಗುತ್ತದೆಂದು ತಮ್ಮೆದುರಿಗೆ ಹೇಳುವುದಕ್ಕೆ ನಾನು ಬಯಸುತ್ತೇನೆ. ವಾಡಿ–ರಾಯಚುರು ರಸ್ತೆ ಈಗ ಮುಗಿದಿದೆ. ಆದರೆ ಗುಲ್ಬರ್ಗಾ–ವಾಡಿ ರಸ್ತೆ ಇನ್ನು ಕೆಲವೇ ದಿವಸಗಳಲ್ಲಿ ತೆಗೆದುಕೊಳ್ಳುವ ಕೆಲಸ ಮಾಡುತ್ತೇವೆ ಎನ್ನುವಂಥದ್ದನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. 3411 ಕಿ.ಮೀ. ರಸ್ತೆ ಏನಿದೆ, ನಾವು ಮೊದಲು ಐಡೆಂಡಿಟಿಫೈ ಮಾಡಿರುವಂಥ ರಸ್ತೆಗಳನ್ನು, ಆ ರಸ್ತೆಗಳನ್ನು ಹೊರತುಪಡಿಸಿ ನಾವು ಯಾವುದನ್ನೂ ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು :– ಮಾನ್ಯ ಸಚಿವರು ಉತ್ತರವನ್ನು ಹೇಳಲಿ, ಯಾರು ವೆಲ್‌ನಲ್ಲಿ ಇರುವವರು ಮಾತನಾಡಬೇಡಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ಮೇ ತಿಂಗಳೊಳಗೆ ಆದ್ಯತೆಯ ಮೇಲೆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆಂದು ಅತ್ಯಂತ ಗೌರವದಿಂದ ಹೇಳುವುದಕ್ಕೆ ಬಯಸುತ್ತೇನೆ. ತಾವು ಸಹಕಾರ ಮಾಡುತ್ತೀರೆಂದು ವಿನಂತಿಸಿಕೊಳ್ಳುತ್ತೇನೆ....

(ಗೊಂದಲ)

ಉಪಾಧ್ಯಕ್ಷರು :– ಪ್ರಶ್ನೋತ್ತರ ಅವಧಿಯನ್ನು ಈಗ ಮುಕ್ತಾಯ ಮಾಡಿದ್ದೇನೆ. ಈಗ ಮುಂದಿನ ವಿಷಯಕ್ಕೆ ಹೋಗುತ್ತಿದ್ದೇನೆ. ದಯವಿಟ್ಟು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

(ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಸ್.ಸುರೇಶ್ ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಇಂದಿನ 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 66 ಪ್ರಶ್ನೆಗಳ ಪೈಕಿ 63 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :– ಮಂಡಿಸಲಾಯಿತು.